# ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ, ದೇವದುರ್ಗ.

## ಸಿ.ಸಿ.ನಂ.346/2023

ದೂರುದಾರರುಃ ಕರ್ನಾಟಕ ರಾಜ್ಯ, ಗಬ್ಬೂರು ಪೋಲಿಸ್ ಠಾಣೆ.

**ವಿರುದ್ಧ**

ಆರೋಪಿತರುಃ

1. ಜಹೀರುದ್ದೀನ ತಂದೆ ಅಬ್ದುಲ್ ಸಾಬ,
ವಯಸ್ಸು: 45 ವರ್ಷ, ಉಃ ಒಕ್ಕಲುತನ,
ಸಾಃ ರಾಮದುರ್ಗ.

2. ಚಾಂದಪಾಷ ತಂದೆ ಜಹೀರುದ್ದೀನ್,
ವಯಸ್ಸು: 27 ವರ್ಷ, ಉಃ ಒಕ್ಕಲುತನ,
ಸಾಃ ರಾಮದುರ್ಗ.

3. ಮಹಿಬೂಬಪಾಷ ತಂದೆ ನಿಜಾಮುದ್ದೀನ್,
ವಯಸ್ಸು: 48 ವರ್ಷ, ಉಃ ಒಕ್ಕಲುತನ,
ಸಾಃ ಪತ್ತೆಪೂರ, ತಾಃ & ಜಿಃ ರಾಯಚೂರು.

4. ಬಂದೆನವಾಜ ತಂದೆ ಜಹೀರುದ್ದೀನ್,
ವಯಸ್ಸು: 20 ವರ್ಷ, ಉಃ ಒಕ್ಕಲುತನ,
ಸಾಃ ರಾಮದುರ್ಗ.

5. ಬಾವುದ್ದೀನ್ ತಂದೆ ಬಾಬುಸಾಬ ಜೈನ್,
ವಯಸ್ಸು: 37 ವರ್ಷಗಳು, ಉಃ ಒಕ್ಕಲುತನ,
ಸಾಃ ರಾಮದುರ್ಗ.

7. ಮಹೆಬೂಬ ತಂದೆ ಜಹೀರುದ್ದೀನ್,
ವಯಸ್ಸು: 26 ವರ್ಷಗಳು, ಉಃ ಒಕ್ಕಲುತನ,
ಸಾಃ ರಾಮದುರ್ಗ.

## ದೋಷರೋಪಣೆ

ಶ್ರೀ. ಸುರೇಶ ಅಣ್ಣಪ್ಪ ಸವದಿ., ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಧೀಶರು, ದೇವದುರ್ಗ, ಈ ಮೂಲಕ 1 ರಿಂದ 5 ಮತ್ತು 7 ನೇ ಆರೋಪಿತರಾದ ನಿಮ್ಮಗಳ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ–

ದಿನಾಂಕ 13.01.2023 ರಂದು 11.00 ಗಂಟೆ ಸಮಯದಲ್ಲಿ ಗಬ್ಬೂರು ಪೊಲೀಸ್ ಠಾಣಾ ಸರಹದ್ದು, ದೇವದುರ್ಗ ತಾಲ್ಲೂಕು, ರಾಮದುರ್ಗ ಗ್ರಾಮದ ಸಾಕ್ಷಿ–4 ರವರ ಹೊಲದ ಹತ್ತಿರ ಆರೋಪಿತರಾದ ನೀವುಗಳು ಅಪರಾಧವೆಸಗುವ ಏಕೋದ್ದೇಶದಿಂದ

ಅಕ್ರಮಕೂಟವನ್ನು ರಚಿಸಿಕೊಂಡು ಅದರ ಸದಸ್ಯರಾಗುವ ಮೂಲಕ ಭಾರತ ದಂಡ ಸಂಹಿತೆ ಕಲಂ.143 ಸಹವಾಚಕ ಕಲಂ.149 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಸದರಿ ಏಕೋದ್ದೇಶದಿಂದ ಮುಂದುವರೆದು, 1 ರಿಂದ 7 ನೇ ಆರೋಪಿತರಾದ ನೀವುಗಳು, ಸದರಿ ಅಕ್ರಮ ಕೂಟದ ಸದಸ್ಯರಾಗಿ ದೊಂಬಿ ಮಾಡುವ ಮೂಲಕ ಭಾರತ ದಂಡ ಸಂಹಿತೆ ಕಲಂ.147 ಸಹವಾಚಕ ಕಲಂ.149 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಸದರಿ ಏಕೋದ್ದೇಶದಿಂದ ಮುಂದುವರೆದು, 1 ರಿಂದ 7 ನೇ ಆರೋಪಿತರಾದ ನೀವುಗಳು, ಸದರಿ ಅಕ್ರಮ ಕೂಟದ ಸದಸ್ಯರಾಗಿ ಅಪಾಯಕರವಾದ ಆಯುಧವಾದ ಬಡಿಗೆ ಮತ್ತು ಸಲಿಕೆಯನ್ನು ಹಿಡಿದುಕೊಂಡು ಬಂದು ದೊಂಬಿ ಮಾಡುವ ಮೂಲಕ ಭಾರತ ದಂಡ ಸಂಹಿತೆ ಕಲಂ.148 ಸಹವಾಚಕ ಕಲಂ.149 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಸದರಿ ಏಕೋದ್ದೇಶದಿಂದ ಮುಂದುವರೆದು, 3, 5 ಮತ್ತು 6 ನೇ ಆರೋಪಿತರಾದ ನೀವುಗಳು ಸಾಕ್ಷಿ-1 ಮತ್ತು 4 ರವರಿಗೆ ಕೈಯಿಂದ ಹೊಡೆದು ಆ ಮೂಲಕ ಭಾರತ ದಂಡ ಸಂಹಿತೆ ಕಲಂ.323 ಸಹವಾಚಕ ಕಲಂ.149 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಸದರಿ ಏಕೋದ್ದೇಶದಿಂದ ಮುಂದುವರೆದು, 1 ನೇ ಆರೋಪಿತರಾದ ನೀವು ಸಾಕ್ಷಿ-4 ರವರೊಂದಿಗೆ ಸಲಿಕೆಯಿಂದ ಎದೆಗೆ ಹೊಡೆದಿದ್ದು, 7 ನೇ ಆರೋಪಿತನು ಬಡಿಗೆಯಿಂದ ಸಾಕ್ಷಿ-4 ರವರಿಗೆ ಎಡಗೈ ಬೆರಳು ಮತ್ತು ಬೆನ್ನಿಗೆ ಹೊಡೆದು ಗಾಯಗೊಳಿಸಿದ್ದು ಜಗಳ ಬಿಡಿಸಲು ಹೋದ ಸಾಕ್ಷಿ-1 ರವರಿಗೆ 2 ಮತ್ತು 4 ನೇ ಆರೋಪಿತರಾದ ನೀವುಗಳು ಬಡಿಗೆಯಿಂದ ಹೊಡೆದು ಗಾಯಗೊಳಿಸಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ.324 ಸಹವಾಚಕ ಕಲಂ.149 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಸದರಿ ಏಕೋದ್ದೇಶದಿಂದ ಮುಂದುವರೆದು, 1 ರಿಂದ 7 ನೇ ಆರೋಪಿತರಾದ ನೀವುಗಳು, ಸಾಕ್ಷಿ–1 ಮತ್ತು 4 ರವರೊಂದಿಗೆ ಜಗಳ ತೆಗೆದು ನಮ್ಮ ಕಬ್ಜಾದಲ್ಲಿರುವ ಹೊಲದಲ್ಲಿ ನೀವು ಏಕೆ ಕೆಲಸ ಮಾಡುತ್ತಿರಿ ಸೂಳೆ ಮಕ್ಕಳೆ ಅಂತಾ ಅವಾಚ್ಯವಾಗಿ ಬೈದು ಆ ಮೂಲಕ ಭಾರತ ದಂಡ ಸಂಹಿತೆ ಕಲಂ.504 ಸಹವಾಚಕ ಕಲಂ.149 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಸದರಿ ಏಕೋದ್ದೇಶದಿಂದ ಮುಂದುವರೆದು, 1 ರಿಂದ 7 ನೇ ಆರೋಪಿತರಾದ ನೀವುಗಳು, ಸಾಕ್ಷಿ–1 ಮತ್ತು 4 ರವರಿಗೆ ಇನ್ನೊಮ್ಮೆ ಈ ಹೊಲದ ತಂಟೆಗೆ ಬಂದರೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವದ ಬೇದರಿಕೆ ಹಾಕಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ.149 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಸದರೀ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ 23.12.2025 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷ್ಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ದೇವದುರ್ಗ.

**ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ, ದೇವದುರ್ಗ.**

**ಸಿ.ಸಿ.ನಂ.346/2023**

ದೂರುದಾರರುಃ ಕರ್ನಾಟಕ ರಾಜ್ಯ, ಗಬ್ಬೂರು ಪೋಲಿಸ್ ಠಾಣೆ.

**ವಿರುದ್ಧ**

ಆರೋಪಿತರುಃ

1. ಜಹೀರುದ್ದೀನ ತಂದೆ ಅಬ್ದುಲ್ ಸಾಬ,
2. ಚಾಂದಪಾಷ ತಂದೆ ಜಹೀರುದ್ದೀನ್,
3. ಮಹಿಬೂಬಪಾಷ ತಂದೆ ನಿಜಾಮುದ್ದೀನ್,
4. ಬಂದೆನವಾಜ ತಂದೆ ಜಹೀರುದ್ದೀನ್,
5. ಬಾವುದ್ದೀನ್ ತಂದೆ ಬಾಬುಸಾಬ ಜೈನ್,
7. ಮಹೆಬೂಬ ತಂದೆ ಜಹೀರುದ್ದೀನ್,

:: **ಆಪಾದನೆ** ::

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ?

ಉತ್ತರಃ–

2. ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ–

ಮೇಲಿನ ಹೇಳಿಕೆಯನ್ನು ಆಪಾದಿತರಿಗೆ ತಿಳಿಯುವಂತೆ ಆತನ ಭಾಷೆಯಲ್ಲಿ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸಿರುತ್ತೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ದೇವದುರ್ಗ.